# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 22/2021**

**ದೋ.ಸಾ. : 6 ಫ್ರಾ.ಸಾ. : 34**

| | | |
|---|---|---|
| ಸಾಕ್ಷಿಯ ಹೆಸರು | : | ಸೈಯ್ಯದ್ ಅಮ್ಜದ್ ಸೈಯ್ಯದ್ ಅಕ್ಬರ್ |
| ತಂದೆಯ ಹೆಸರು | : | ಸೈಯ್ಯದ್ ಅಕ್ಬರ್ |
| ವಯಸ್ಸು | : | 48 ವರ್ಷ |
| ಕೆಲಸ | : | ವ್ಯಾಪಾರ |
| ವಾಸ | : | ಅಸುರಖಾನಗಲ್ಲಿ, ಹೊನ್ನಾವರ |

**ದಿನಾಂಕಃ 16-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ದಿ.03-05-2021 ರಂದು ರಾತ್ರಿ ನಾನು ಮತ್ತು ಚಾಸಾ-7 ರವರು ಮೆಡಿಸಿನ್ ತರಲು ಹೊನ್ನಾವರದ ತುಳಸಿ ಫಾರ್ಮಸಿಗೆ ಹೋಗಿದ್ದೆವು. ಅಲ್ಲಿ ಪೊಲೀಸರು ನಮಗೆ ಪಂಚರಾಗಿ ಬರುವಂತೆ ನೋಟೀಸು ನೀಡಿದರು. ಅದರಂತೆ, ನಾವು ಹೊನ್ನಾವರ ಪೊಲೀಸ್ ಠಾಣೆಗೆ ಹೋದಾಗ, ಪೊಲೀಸರು ಹಾಗೂ ಆರೋಪಿ ಠಾಣೆಯಲ್ಲಿದ್ದರು. ಅಲ್ಲಿ ಆರೋಪಿಯು ಅಬುತಾಲೀಬ್ ಎನ್ನುವವರನ್ನು ಕೊಲೆ ಮಾಡುವಾಗ, ಧರಿಸಿದ ನೀಲಿ ಬಣ್ಣದ ಶರ್ಟನ್ನು ಆತನಿಂದ ಬಿಚ್ಚಿಸಿ, ನಮ್ಮ ಸಮಕ್ಷಮ ಜಪ್ತುಪಡಿಸಿಕೊಂಡರು. ಸದರಿ ಶರ್ಟಿಗೆ ರಕ್ತದ ಕಲೆಗಳಾಗಿರುತ್ತದೆ. ಪೊಲೀಸರು ಆ ಶರ್ಟನ್ನು ಒಂದು ಕವರ್‌ನಲ್ಲಿ ಹಾಕಿ, ಬಟ್ಟೆ ಸುತ್ತಿ, ಸೀಲ್ ಮಾಡಿ ನಮ್ಮ ಸಹಿಯನ್ನು ಪಡೆದುಕೊಂಡರು. ಆಗ ಸಮಯ ರಾತ್ರಿ 11.00 ರಿಂದ 11.50 ಗಂಟೆ ಆಗಿತ್ತು. ಶರ್ಟನ್ನು ಜಪ್ತುಪಡಿಸಿಕೊಳ್ಳುವ ಕಾಲಕ್ಕೆ ಪೊಲೀಸರು ಜಪ್ತು ಪಂಚನಾಮೆ ಮಾಡಿ, ನಮ್ಮ ಸಹಿಯನ್ನು ಪಡೆದುಕೊಂಡರು ಹಾಗೂ ಛಾಯಾಚಿತ್ರವನ್ನು ತೆಗೆದರು. ಸಾಕ್ಷಿಯು ಜಪ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು

ಗುರುತಿಸಲಾಗಿದೆ. ಸಾಕ್ಷಿಯು ಪೊಲೀಸರು ತನಗೆ ನೀಡಿದ ನೋಟಿಸನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು.

2. ಸಾಕ್ಷಿಯು ಆರೋಪಿಯಿಂದ ಜಪ್ತು ಪಡಿಸಿಕೊಂಡ ಶರ್ಟನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ-1 ಎಂದು, ಅದಕ್ಕೆ ಅಂಟಿಸಿದ ಚೀಟಿಯ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ-1(ಸಿ) ಎಂದು ಗುರುತಿಸಲಾಯಿತು. ನಾವು ಠಾಣೆಯಿಂದ ಹೊ ರಡುವಾಗ, ಪೊಲೀಸರು ನಾಳೆ ಅವಶ್ಯಕತೆ ಇದ್ದರೆ ಮತ್ತೆ ಕರೆಸುತ್ತೇವೆ ಎಂದು ಹೇಳಿದ್ದರು. ಮಾರನೇ ದಿನ ದಿ.04-05-2021 ರಂದು ಬೆಳಿಗ್ಗೆ 7.30 ಕ್ಕೆ ಪೊಲೀಸರು ಚಾಸಾ-6 ರವರಿಗೆ ಪೋನ್ ಮಾಡಿ, ನಮ್ಮನ್ನು ಠಾಣೆಗೆ ಬರುವಂತೆ ಹೇಳಿದ್ದು, ಅದರಂತೆ ನಾವು ಠಾಣೆಗೆ ಹೋದಾಗ, ಪೊಲೀಸರು ಹಾಗೂ ಆರೋಪಿ ಠಾಣೆಯಲ್ಲಿದ್ದರು. ಅಲ್ಲಿ ಪೊಲೀಸರು ನಮಗೆ ಪಂಚನಾಮೆಗೆ ಬರುವಂತೆ ನೋಟಿಸನ್ನು ನೀಡಿರುತ್ತಾರೆ. ಆರೋಪಿ ತಾನು ಕೊಲೆ ಮಾಡಲು ಬಳಸಿದ ಚಾಕು ಹಾಗೂ ತಾನು ತೊಟ್ಟ ಲುಂಗಿಯನ್ನು ತೋರಿಸುತ್ತೇನೆಂದು ಹೇಳಿದ ಮೇರೆಗೆ, ಬೆಳಿಗ್ಗೆ 8.00 ಗಂಟೆಗೆ ಪೊಲೀಸರು ನಮ್ಮನ್ನು ಠಾಣೆಯಿಂದ ತಮ್ಮ ಜೀಪ್‌ನಲ್ಲಿ ಆರೋಪಿಯು ತೋರಿಸಿದಂತೆ ಚಂದಾವರಕ್ಕೆ ಕರೆದುಕೊಂಡು ಹೋದರು. ಅದರಂತೆ, ನಾವು ಚಂದಾವರಕ್ಕೆ ತಲುಪಿದಾಗ, ಒಂದು ಟಾರ್ ರಸ್ತೆಯ ನಂತರ, ಮಣ್ಣಿನ ರಸ್ತೆಯಲ್ಲಿ ಆರೋಪಿಯು ಜೀಪನ್ನು ನಿಲ್ಲಿಸಲು ಹೇಳಿದ ಮೇರೆಗೆ, ಪೊಲೀಸರು ಜೀಪನ್ನು ನಿಲ್ಲಿಸಿರುತ್ತಾರೆ. ನಂತರ, ನಾವು ಸ್ವಲ್ಪ ದೂರ ನಡೆದುಕೊಂಡು ಹೋದೆವು. ಅಲ್ಲಿ ಒಂದು ಸೇತುವೆ ಕೆಳಗೆ ಆರೋಪಿ ತಾನು ಬಚ್ಚಿಟ್ಟ ಚಾಕು ಹಾಗೂ ಲುಂಗಿಯನ್ನು ತೋರಿಸಿದನು ಹಾಗೂ ಅವುಗಳನ್ನು ಚೀಲದಲ್ಲಿ ಇಡಲಾಗಿತ್ತು. ಆಗ ಸಮಯ ಬೆಳಿಗ್ಗೆ 8.45 ಗಂಟೆಯಾಗಿತ್ತು. ಪೊಲೀಸರು ಅವುಗಳನ್ನು ನಮ್ಮ ಸಮಕ್ಷಮ ಜಪ್ತುಪಡಿಸಿಕೊಡರು. ಪೊಲೀಸರು ಸ್ಥಳದಲ್ಲಿ ಪಂಚನಾಮೆ ಮಾಡಿ, ನಕಾಶೆ ತಯಾರಿಸಿ, ಛಾಯಾಚಿತ್ರಗಳನ್ನು ತೆಗೆದರು. ಆಗ ಆರೋಪಿಯು ಅಲ್ಲಿಯೇ ಪಕ್ಕದಲ್ಲಿದ್ದ ಹೊಂಡವನ್ನು ತೋರಿಸಿ, ಚಾಕು ಹಾಗೂ ಲುಂಗಿಗೆ ಆದ ರಕ್ತದ ಕಲೆಗಳನ್ನು ತೊಳೆದಿರುತ್ತೇನೆ ಎಂದು ಹೇಳಿದ ಹಾಗೂ ಅದೇ ಸ್ಥಳದಲ್ಲಿ ತನ್ನ ಶರ್ಟನ್ನು ತೊಳೆದು, ಪುನಃ ಧರಿಸಿಕೊಂಡೆ ಎಂದು ಹೇಳಿದ. ನಂತರ, ಪೋಲೀಸರು ಚಾಕು, ಲುಂಗಿಯನ್ನು ಹಾಗೂ ಚೀಲವನ್ನು ಪ್ರತ್ಯೇಕ ಕವರ್ ನಲ್ಲಿ ಹಾಕಿ, ಬಟ್ಟೆ ಸುತ್ತಿ, ಸೀಲ್ ಮಾಡಿ, ನಮ್ಮ ಸಹಿ ಪಡೆದುಕೊಂಡರು. ಸಾಕ್ಷಿಯು ಸದರಿ ಜಪ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-4 ಎಂದು

ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು 3 ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-5 ರಿಂದ 7 ಎಂದು ಗುರುತಿಸಲಾಗಿರುತ್ತದೆ. ನಿಪಿ-5 ಛಾಯಚಿತ್ರದಲ್ಲಿ ಆರೋಪಿಯು ಚಾಕುವನ್ನು ನೀಡುತ್ತಿರುವುದು, ನಿಪಿ-6 ರಲ್ಲಿ ಲುಂಗಿಯನ್ನು, ನಿಪಿ-7 ರಲ್ಲಿ ಆರೋಪಿಯು ನೀರು ಇರುವ ಹೊಂಡವನ್ನು ತೋರಿಸುತ್ತಿರುವುದು ಕಂಡುಬಂದಿರುತ್ತದೆ. ಸಾಕ್ಷಿಯು ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-8(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪೊಲೀಸರು ತನಗೆ ನೀಡಿದ ನೋಟೀಸನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-9 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-9(ಸಿ) ಎಂದು ಗುರುತಿಸಲಾಯಿತು.

3. ಸಾಕ್ಷಿಯು ಆ ದಿನ ಆರೋಪಿ ತೋರಿಸಿದ ಚಾಕು, ಲುಂಗಿ ಹಾಗೂ ಚೀಲವನ್ನು ನೋಡಿ ಗುರುತಿಸಿದ್ದು, ಚಾಕುವನ್ನು ಈಗಾಗಲೇ ಎಂ.ಓ-2 ಎಂದು ಗುರುತಿಸಲಾಗಿದ್ದು, ಅದಕ್ಕೆ ಅಂಟಿಸಿದ ಚೀಟಿಯ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ-2(ಸಿ) ಎಂದು ಗುರುತಿಸಲಾಯಿತು. ಲುಂಗಿಯನ್ನು ಈಗಾಗಲೇ ಎಂ.ಓ-3 ಎಂದು ಗುರುತಿಸಲಾಗಿದ್ದು, ಅದಕ್ಕೆ ಅಂಟಿಸಿದ ಚೀಟಿಯ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ-3(ಸಿ) ಎಂದು ಗುರುತಿಸಲಾಯಿತು. ಚೀಲವನ್ನು ಈಗಾಗಲೇ ಎಂ.ಓ-4 ಎಂದು ಗುರುತಿಸಲಾಗಿದ್ದು, ಅದಕ್ಕೆ ಅಂಟಿಸಿದ ಚೀಟಿಯ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ-4(ಸಿ) ಎಂದು ಗುರುತಿಸಲಾಯಿತು. ನಿಪಿ-4 ಪಂಚನಾಮೆಯನ್ನು ಬೆಳಿಗ್ಗೆ 8.00 ರಿಂದ 10.30 ಗಂಟೆಯವರೆಗೆ ಮಾಡಿರುತ್ತಾರೆ. ಠಾಣೆಯಲ್ಲಿ ಆ ದಿನ ನೋಡಿದ ಆರೋಪಿಯು ಈ ದಿನ ನ್ಯಾಯಾಲಯದ ವಿ.ಸಿ.ಯಲ್ಲಿ ಕಾಣುತ್ತಿರುತ್ತಾನೆ.

**ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ. ರವರಿಂದಃ-**

4. ಮೃತ ಅಬುತಾಲೀಬ್ ನನಗೆ ಸಂಬಂಧಿ ಎಂದರೆ ಸರಿಯಲ್ಲ. ಘಟನೆಯ ಪೂರ್ವದಲ್ಲಿ ಅಬುತಾಲೀಬ್ ರವರನ್ನು ನಾನು ನೋಡಿರುವುದಿಲ್ಲ. ಪಂಚನಾಮೆಗಳನ್ನು ಬರೆಯಲು ನಾನು ಯಾವುದೇ ಮಾಹಿತಿ ನೀಡಿರುವುದಿಲ್ಲ. ಪೊಲೀಸರು ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ. ನಾನು ಯಾವುದೇ ಪಂಚನಾಮೆಗೆ ಹೋಗಿಲ್ಲ, ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ನಕಾಶೆ ತಯಾರಿಸಿಲ್ಲ ಮತ್ತು ಫೋಟೊ ತೆಗೆದಿಲ್ಲ ಹಾಗೂ ಯಾವುದೇ

ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಜಪ್ತುಪಡಿಸಿಕೊಂಡ ಲುಂಗಿಯು ಎಲ್ಲಾ ಅಂಗಡಿಗಳಲ್ಲಿ ಸಿಗುತ್ತದೆ ಎಂದರೆ ಸರಿ. ಹೊನ್ನಾವರದಲ್ಲಿ ನಾನು ಮೀನಿನ ಅಂಗಡಿಯನ್ನು ಇಟ್ಟುಕೊಂಡಿರುತ್ತೇನೆ ಎಂದರೆ ಸರಿ. ಪೊಲೀಸರ ಒತ್ತಡದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಚಾಕುವಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ–ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ

*ಸಹಿ ಇದೆ.*

(ಮಾಯಣ್ಣ ಬಿ. ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ